
ಮಹಾಜನ ವಿದ್ಯಾಸಂಸ್ಥೆ (ರಿ.)
ಶಿಕ್ಷಣದಿಂದ ಶ್ರೇಷ್ಠತೆ

ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು-೧೨
ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು
ನ್ಯಾಕ್‌ನಿಂದ "ಎ" ಮಾನ್ಯತೆ ಪಡೆದಿದೆ.
ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು



ಕನ್ನಡ ವಿಭಾಗ
ಮತ್ತು
ಅಭಿನವ ಬೆಂಗಳೂರು

# ಪ್ರೊ. ಜಿ.ಎಚ್. ನಾಯಕ - ೮೮

## ರಾಷ್ಟ್ರೀಯ ವಿಚಾರ ಸಂಕಿರಣ

## ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು

ದಿನಾಂಕ: ೨೨- ೬-೨೦೨೩ ಶುಕ್ರವಾರ
ಸಮಯ: ಬೆಳಗ್ಗೆ ೧೦ ಗಂಟೆಗೆ
ಸ್ಥಳ : ವಿವೇಕಾನಂದ ಸಭಾಂಗಣ
ಮಹಾಜನ ವಿದ್ಯಾಸಂಸ್ಥೆ, ಮೈಸೂರು.




ಎಲ್ಲರಿಗೂ ಆದರದ ಸ್ವಾಗತ

ಪ್ರೊ. ಜಿ.ಎಚ್. ನಾಯಕ – ೮೮

ರಾಷ್ಟ್ರೀಯ ವಿಚಾರ ಸಂಕಿರಣ

# ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು



ಬೆಳಗ್ಗೆ ೧೦ ರಿಂದ ೧೧.೧೦

ನುಡಿ ಚಾಲನೆ

**ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ**

ಬೆಂಗಳೂರು

ನುಡಿ ಹೊತ್ತಿಗೆ

**'ನ್ಯಾಯ ನಿಷ್ಠುರಿ' ಜಿ.ಎಚ್. ನಾಯಕ**

**ಶತಮಾನದ ಕನ್ನಡ ಸಾಹಿತ್ಯ : ಜಿ.ಎಚ್. ನಾಯಕ**

**ಲೋಕಾರ್ಪಣೆ: ಶ್ರೀಮತಿ ಮೀರಾ ನಾಯಕ**

ಸಾಕ್ಷಿನುಡಿ

**ಪ್ರೊ. ಎನ್. ಬೋರಲಿಂಗಯ್ಯ**

ಮೈಸೂರು.

ಉಪಸ್ಥಿತರು

**ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್**

ಗೌ. ಕಾರ್ಯದರ್ಶಿಗಳು, ಮಹಾಜನ ವಿದ್ಯಾಸಂಸ್ಥೆ

**ಡಾ. ಬಿ.ಆರ್. ಜಯಕುಮಾರಿ**

ಪ್ರಾಂಶುಪಾಲರು, ಮಹಾಜನ ಪ್ರಥಮ ದರ್ಜೆ ಕಾಲೇಜು

ನುಡಿ ತೋರಣ

**ಡಾ. ಎಚ್.ಆರ್. ತಿಮ್ಮೇಗೌಡ**

ಮುಖ್ಯಸ್ಥರು, ಕನ್ನಡ ವಿಭಾಗ

ನುಡಿ ತಂತು

**ನ. ರವಿಕುಮಾರ್**

ಅಭಿನವ ಬೆಂಗಳೂರು.

## ಅಂಕಣ – ೧

ಬೆಳಗ್ಗೆ ೧೧.೧೫ ರಿಂದ ೧೨.೪೫

## ಅಂತ:ಕರಣದ ಅನುರೂಪ ಜಿ.ಎಚ್. ನಾಯಕ

ಜಿ.ಎಚ್. ನಾಯಕರಿಂದ ನಾನು ಕಲಿತದ್ದೇನು?

**ಶ್ರೀಮತಿ ಕೀರ್ತಿಶ್ರೀ ನಾಯಕ**

ಮೈಸೂರು

ಕಲಿಯುತ್ತ ಕಲಿಸಿದ ಪರಿ

**ಪ್ರೊ. ಪಂಡಿತಾರಾಧ್ಯ**

ಮೈಸೂರು.

ನಾಯಕರ ನಿಜದನಿ

**ಪ್ರೊ. ಎಂ. ಕೃಷ್ಣೇಗೌಡ**

ಮೈಸೂರು.

ನುಡಿ ತಂತು

**ಡಾ. ವಿನೋದಮ್ಮ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

## ಅಂಕಣ – ೨

ಮಧ್ಯಾಹ್ನ ೧೨.೪೫ ರಿಂದ ೧.೪೫

ಕನ್ನಡ ಸಾಹಿತ್ಯದಲ್ಲಿ ಮೌಲ್ಯಮಾರ್ಗದ ಮಾದರಿಗಳು

**ಡಾ. ರಾಜೇಂದ್ರ ಚೆನ್ನಿ**

ಶಿವಮೊಗ್ಗ

ನುಡಿ ತಂತು

**ಶ್ರೀ ಮನೋಜ್‌ಕುಮಾರ್ ಜಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ



ಊಟದ ವಿರಾಮ : ೧.೪೫ ರಿಂದ ೨.೩೦

ಅಂಕಣ – ೩
ಮಧ್ಯಾಹ್ನ ೨.೩೦ ರಿಂದ ೪

## ಮೌಲ್ಯ ಮಾರ್ಗಗಳು
## ಸಮಕಾಲೀನತೆ ಮತ್ತು ಸಾರ್ವಕಾಲಿಕತೆ

ನಡೆಸಿಕೊಡುವವರು
**ಶ್ರೀ ಜಿ.ಪಿ. ಬಸವರಾಜು**
ಮೈಸೂರು

ಸಾಂಸ್ಕೃತಿಕ ಎಚ್ಚರದ ನೆಲೆ
**ಡಾ. ವಿಕ್ರಮ ವಿಸಾಜಿ**
ಬೀದರ್

ಸಮುದಾಯ ಪ್ರಜ್ಞೆಯ ನೆಲೆ
**ಡಾ. ಸುಭಾಷ್ ರಾಜಮಾನೆ**
ಬೆಳಗಾವಿ

ಸಾಮರಸ್ಯದ ನೆಲೆ
**ಡಾ. ಸಿರಾಜ್ ಅಹಮದ್**
ಶಿವಮೊಗ್ಗ

ಸೃಜನಶೀಲ ನೆಲೆ
**ಡಾ. ಪಿ. ಚಂದ್ರಿಕಾ**
ಬೆಂಗಳೂರು

ಭಾಷಿಕ ನೆಲೆ
**ಪ್ರೊ. ತಮಿಳ್‌ಸೆಲ್ವಿ**
ಚೆನ್ನೈ

ನುಡಿ ತಂತು
ಶ್ರೀ ಸಿ.ಎಂ. ಕಿರಣ್‌ಕುಮಾರ್ ದೇಸಾಯ್
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಅಂಕಣ – ೩

ಸಮಯ ೩ ರಿಂದ ೪

ಸಮನ್ವಯ ನುಡಿ

**ಡಾ. ಎಂ.ಎಸ್.ಆಶಾದೇವಿ**

ಬೆಂಗಳೂರು

ಸಾಕ್ಷ್ಯನುಡಿ

**ಡಾ. ಬಿ.ಆರ್. ಜಯಕುಮಾರಿ**


ಪ್ರಾಂಶುಪಾಲರು, ಮಹಾಜನ ಪ್ರಥಮ ದರ್ಜೆ ಕಾಲೇಜು

ನುಡಿ ತಂತು

**ಶ್ರೀ ನಾಗೇಶ ಎಂ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ





# ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)

ಮಹಾಜನ ವಿದ್ಯಾಸಂಸ್ಥೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ೧೯೬೭ರಲ್ಲಿ ಸ್ಥಾಪನೆಗೊಂಡು, ನರ್ಸರಿಯಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ವ್ಯಾಪಕವಾಗಿ ಬೆಳೆದು ಒಂದು ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾಗಿ ಜನಮಾನಸದಲ್ಲಿ ನೆಲೆನಿಂತಿದೆ. ಸ್ವಾತಂತ್ರ್ಯಪೂರ್ವದ ಮೌಲ್ಯಗಳಿಂದ ಪ್ರಭಾವಿತವಾಗಿ ಸಮಾಜ ಸೇವೆಗೆ ತನ್ನನ್ನು ತಾನೇ ಸಮರ್ಪಿಸಿಕೊಂಡಿರುವ ಸಂಸ್ಥೆ ತನ್ನ ಏಳು ಅಂಗ ಸಂಸ್ಥೆಗಳ ಮೂಲಕ ಪ್ರವರ್ಧಮಾನಕ್ಕೆ ಬಂದಿದೆ. ಹಿರಿಯ ಮುತ್ಸದ್ದಿಗಳು, ಶಿಕ್ಷಣತಜ್ಞರನ್ನು ಒಳಗೊಂಡ ಆಡಳಿತವು ಶಿಕ್ಷಣರಂಗದಲ್ಲಿ ಮಹತ್ವದ ಕೊಡುಗೆಗಳನ್ನು ನೀಡಲು ಕಾರ್ಯಪ್ರವೃತ್ತವಾಗಿದೆ. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮಹಾಜನ ವಿದ್ಯಾಸಂಸ್ಥೆಯ ಕೊಡುಗೆಯಾಗಿ ೧೯೮೩ರಲ್ಲಿ ಮಹಿಳಾ ಕಾಲೇಜಿನ ರೂಪದಲ್ಲಿ ಜನ್ಮ ತಳೆಯಿತು. ೧೯೮೭ರಲ್ಲಿ ಅನುದಾನಕ್ಕೆ ಒಳಪಟ್ಟು, ಮುಂದಿನ ವರ್ಷದಿಂದ ಸಹಶಿಕ್ಷಣ ಕಾಲೇಜಾಗಿ ಪರಿವರ್ತನೆಗೊಂಡಿತು. ವಾಣಿಜ್ಯ ಮತ್ತು ಮಾನವಿಕ ವಿಷಯಗಳಿಂದ ಆರಂಭಗೊಂಡು ೧೯೮೯ರಲ್ಲಿ ವಿಜ್ಞಾನ, ೧೯೯೪ರಲ್ಲಿ ವ್ಯವಹಾರ ನಿರ್ವಹಣಾ ಶಾಸ್ತ್ರ ೨೦೦೪ರಲ್ಲಿ ಜೈವಿಕ ತಂತ್ರಜ್ಞಾನ ಮತ್ತು ೨೦೦೮ರಲ್ಲಿ ಗಣಕಶಾಸ್ತ್ರ, ೨೦೦೯ರಲ್ಲಿ ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (ಬಿ.ಸಿ.ಎ) ಕೋರ್ಸುಗಳನ್ನು ಪರಿಚಯಿಸಲಾಯಿತು. ಕಾಲೇಜಿನ ಮೂಲ ಆಶಯಗಳ ತಾರ್ಕಿಕ ಮುಂದುವರಿಕೆ ಎಂಬಂತೆ ಸ್ನಾತಕೋತ್ತರ ಕೇಂದ್ರವನ್ನು ತೆರೆದು ಉನ್ನತ ಶಿಕ್ಷಣದಲ್ಲಿ ಮೈಲಿಗಲ್ಲನ್ನು ಸಾಧಿಸುತ್ತಿದೆ. ತನ್ನ ಬೆಳ್ಳಿ ಹಬ್ಬವನ್ನು ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ ಉಪಸ್ಥಿತಿಯಲ್ಲಿ ಆಚರಿಸಿಕೊಂಡ ಕಾಲೇಜು, ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಗುರಿಯಾಗಿಸಿಕೊಂಡು ನಾಲ್ಕು ದಶಕಗಳನ್ನು ಪೂರೈಸುತ್ತ ಉಪಕ್ರಮಿಸಿದೆ. ನ್ಯಾಕ್ ನಿಂದ 'ಎ' ಗ್ರೇಡ್, ಯುಜಿಸಿಯಿಂದ ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು ಎಂದು ಮಾನ್ಯತೆ ಪಡೆದಿರುವ ಹಾಗೂ ನಿರಂತರ ನಾಲ್ಕು ದಶಕಗಳಿಂದ ಗುಣಾತ್ಮಕ ಶಿಕ್ಷಣ ನೀಡುತ್ತಿರುವ ಮಹಾಜನ ಪ್ರಥಮ ದರ್ಜೆ ಕಾಲೇಜು ೨೦೧೮ರಲ್ಲಿ ಸ್ವಾಯತ್ತತೆ ಪಡೆದಿದೆ.

# ಕನ್ನಡ ವಿಭಾಗ



ವಿದ್ಯಾರ್ಥಿಗಳಿಗೆ ಕನ್ನಡಪಠ್ಯ ಬೋಧನೆಯೊಂದಿಗೆ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿರುಚಿಯನ್ನು ಬೆಳೆಸುವ ಹಲವು ಉತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ವಿದ್ಯಾರ್ಥಿಗಳ ಕ್ರಿಯಾಶೀಲ ಬರವಣಿಗೆಯನ್ನು ಪ್ರೋತ್ಸಾಹಿಸುವುದಕ್ಕಾಗಿ 'ಸ್ಫೂರ್ತಿ' ಮಾಸಪತ್ರಿಕೆಯನ್ನು ಹೊರತರುತ್ತಿದೆ. ೨೦೦೫ರಲ್ಲಿ 'ಜಾಗತೀಕರಣ ಮತ್ತು ಕನ್ನಡ ಸಾಹಿತ್ಯ', ೨೦೧೦ರಲ್ಲಿ 'ಆಧುನಿಕ ಕನ್ನಡ ಸಾಹಿತ್ಯ : ಸಂಸ್ಕೃತಿ ಪುನಾರಚನೆಯ ಸವಾಲು, ೨೦೧೩ರಲ್ಲಿ 'ಸಮಕಾಲೀನ ಕನ್ನಡ ಸಾಹಿತ್ಯ ಸವಾಲುಗಳು ಮತ್ತು ಹೊಸ ಮಾದರಿಗಳು' ೨೦೨೩ರಿಂದು 'ಬಾ ವಿಮರ್ಶಾ ದರ್ಶನಕೆ' ಎಂಬ ಶೀರ್ಷಿಕೆಯಲ್ಲಿ 'ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶಾ ಪರಂಪರೆ' ಎಂಬ ವಿಷಯ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು ಜೊತೆಗೆ ಹಲವಾರು ರಾಜ್ಯಮಟ್ಟದ ವಿಚಾರ ಸಂಕಿರಣಗಳನ್ನು ಆಯೋಜಿಸಿ ಯಶಸ್ವಿಯಾಗಿದೆ. ೨೦೨೩ ರಲ್ಲಿ ಹಿರಿಯ ಐಚ್ಚಿಕ ಕನ್ನಡ ವಿದ್ಯಾರ್ಥಿಗಳಿಂದ ಕನ್ನಡ ವಿಭಾಗವು ನವೀಕರಣಗೊಂಡು ಮಾದರಿ ವಿಭಾಗವಾಗಿದೆ.

# ಅಭಿನವ

ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿರುವ ಅಭಿನವಕ್ಕೆ ಈಗ ೨೭ವರ್ಷ. ವಿಚಾರಸಂಕಿರಣ, ಕಾರ್ಯಶಿಬಿರ, ಉಪನ್ಯಾಸ, ಶಿಕ್ಷಣ ಮತ್ತು ಪರಿಸರ ಜಾಗೃತಿ, ಪುಸ್ತಕ ಪ್ರಕಟಣೆ, ಚಾತುರ್ಮಾಸಿಕ ಪತ್ರಿಕೆ ಅಭಿನವದ ಆಸಕ್ತಿಯ ಭೂಮಿಕೆಗಳು. ಹಿರಿಕಿರಿಯ ಲೇಖಕರ ೮೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ ಹೆಮ್ಮೆ ಅಭಿನವದ್ದು. ವಿ. ಕೃ. ಗೋಕಾಕ್, ಯು. ಆರ್. ಅನಂತಮೂರ್ತಿ, ಎಚ್. ನರಸಿಂಹಯ್ಯ, ಷ. ಶೆಟ್ಟರ್, ಪ್ರಭುಶಂಕರ, ದೇವನೂರ ಮಹಾದೇವ, ಜಿ. ರಾಜಶೇಖರ, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಂ. ಬಸವಣ್ಣ, ಓ. ಎಲ್. ನಾಗಭೂಷಣಸ್ವಾಮಿ, ರಾಜೇಂದ್ರ ಚೆನ್ನಿ, ಕೆ. ಸಿ. ಶಿವಪ್ಪ, ಕೆ. ಸತ್ಯನಾರಾಯಣ, ರಹಮತ್ ತರೀಕೆರೆ, ಡಿ. ಆರ್. ನಾಗರಾಜ್, ಚಿ. ಶ್ರೀನಿವಾಸರಾಜು, ಕೆ. ವಿ. ನಾರಾಯಣ, ಎಚ್. ಎಸ್. ಗೋಪಾಲರಾವ್, ಎಚ್. ಎಸ್. ರಾಘವೇಂದ್ರರಾವ್, ಬಸವರಾಜ ಕಲ್ಗುಡಿ, ಆನಂದ ಪಾಟೀಲ, ಎಚ್. ಎಸ್. ವೆಂಕಟೇಶಮೂರ್ತಿ,, ಪುಟ್ಟಸ್ವಾಮಿ, ಲಕ್ಷ್ಮೀಶ ತೋಳ್ಪಾಡಿ , ಕೆ. ವಿ. ತಿರುಮಲೇಶ್, ಜಿ. ಎನ್. ಮೋಹನ್, ವೈದೇಹಿ, ಅಬ್ದುಲ್ ರಶೀದ್, ಲಕ್ಷ್ಮೀಪತಿ ಕೋಲಾರ, ವಿಕ್ರಮ ವಿಸಾಜಿ ಮುಂತಾದವರ ಕೃತಿಗಳನ್ನು ಅಭಿನವ ಪ್ರಕಟಿಸಿದೆ. ನಾಡಿನಾದ್ಯಂತ ಹಲವಾರು ಕಾರ್ಯಶಿಬಿರ, ಕಮ್ಮಟ ವಿಚಾರಸಂಕಿರಣಗಳಲ್ಲದೆ ಶಿಕ್ಷಣ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.



# ಆಶಯ

ಕನ್ನಡ ವಿಭಾಗವು ಹೊಸ ಮೈಲಿಗಲ್ಲನ್ನು ನಿರ್ಮಿಸುವ ಸಲುವಾಗಿ ೨೨.೦೬.೨೦೨೩ ರಂದು 'ಪ್ರೊ. ಜಿ.ಎಚ್ ನಾಯಕ – ೮೮' ಎಂಬ ಶೀರ್ಷಿಕೆಯಲ್ಲಿ 'ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಎಂಬ ವಿಷಯ ಕುರಿತು ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಸಾಮಾಜಿಕ ಮೌಲ್ಯಗಳು ವ್ಯಕ್ತಿಯ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಷ್ಟೆ ಅಲ್ಲ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತವೆ. ಅವು ನಮ್ಮ ವರ್ತನೆಗಳನ್ನು ನಿರ್ಧರಿಸುವುದು ಮಾತ್ರವಲ್ಲ ಮುಂದಿನ ಪೀಳಿಗೆಯನ್ನು ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿಯೂ ರೂಪಿಸುವಲ್ಲಿಯೂ ಪಾತ್ರವಹಿಸುತ್ತವೆ. ಜೊತೆಗೆ ಈ ಮೌಲ್ಯಗಳು ಸಾಮಾಜಿಕ ವ್ಯವಸ್ಥೆಯನ್ನು ಕಾಪಿಡುತ್ತವೆ. ಆಧುನೀಕರಣ ಮತ್ತು ಔದ್ಯೋಗಿಕ ಕಾರಣಗಳಿಗಾಗಿ ಮಾನವ ಸಂಬಂಧಗಳಲ್ಲಿ ಮಾತ್ರವಲ್ಲ ಸಾಮಾಜಿಕ ಮೌಲ್ಯಗಳಲ್ಲಿಯೂ ಹಲವು ಪಲ್ಲಟಗಳಾಗಿವೆ. ಆ ಕುರಿತು ಈ ವಿಚಾರ ಸಂಕಿರಣದಲ್ಲಿ ಎಲ್ಲರೂ ಚರ್ಚಿಸಿ ಯೋಚಿಸಬೇಕಾಗಿದೆ.

ಸಾಹಿತ್ಯ ಸಮಾಜದ ಪ್ರತಿಬಿಂಬವಾಗಿರುವ ಕಾರಣ ಸಾಮಾಜಿಕ ಪಲ್ಲಟಗಳನ್ನು ಅಧ್ಯಯನ ಮಾಡಲು ಸಾಧ್ಯ. ಜಿ.ಎಚ್.ನಾಯಕರು ಬದುಕು ಮತ್ತು ಬರವಣಿಗೆಯಲ್ಲಿ ಸಾಮಾಜಿಕ ಮೌಲ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟವರು. ಬದುಕಿನುದ್ದಕ್ಕೂ ಆದರ್ಶದ ಬದುಕನ್ನು ಮೈತುಂಬಿಕೊಂಡು ಬಾಳಿದವರು. ಮಾನವೀಯ ನೆಲೆಯ ಅಂತಃಕರಣಕ್ಕೆ ಹೇಗೋ ಸಾಮಾಜಿಕ ಬದ್ಧತೆಗೂ ಅವರ ಬರಹಗಳು ಸಾಕ್ಷಿಯಾಗಿವೆ. ಅವರ ಬರಹಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಸಾಮಾಜಿಕ ಮೌಲ್ಯಗಳ ಚಹರೆಗಳನ್ನು, ಮಾದರಿಗಳನ್ನು ಗುರುತಿಸುವುದು ಈ ವಿಚಾರ ಸಂಕಿರಣದ ಮುಖ್ಯ ಆಶಯವಾಗಿದೆ. ಕನ್ನಡದಲ್ಲಿ ಸಮಕಾಲೀನತೆ ಮತ್ತು ಸಾರ್ವಕಾಲಿಕ ಮೌಲ್ಯ ವ್ಯವಸ್ಥೆಯನ್ನು ದೇಶ ಕಾಲಾನುಕ್ರಮದಲ್ಲಿ ಗ್ರಹಿಸಿದ ಮಾದರಿಗಳನ್ನು ಗುರುತಿಸುತ್ತಲೇ ನಾಳಿನ ಸಮಾಜದ ಬಗೆಗೆ ಕ್ರಿಯಾಶೀಲವಾಗಿ ತೊಡಗಿಕೊಳ್ಳುವುದಕ್ಕೆ ಈ ವಿಚಾರ ಸಂಕಿರಣ ನೆರವಾಗಬಲ್ಲದೆಂಬುದು ನಮ್ಮ ನಂಬಿಕೆ.

